ಇನ್ಯಾರಾದರೂ ಇರಬಹುದೇ? ಅವರಿಗೆ ಹೇಳಿದ ಮಾತು ನಂಗೆ ಕೇಳಿಸಿತೇ ಎನ್ನುವ ಗೊಂದಲ ಶುರುವಾಗಿ ಅವನ ಮಾತಿಗೆ ಉತ್ತರಿಸದೆ ಫೋನ್ ಇಡುತ್ತ ಈಡಿಯಟ್ ಅಂತ ಗೊಣಗಿದ್ದಳು. ಗಂಡ ಇಲ್ಲ, ಬಯಲಾಜಿಕಲ್ ನೀಡ್ಸ್‌ಗಳನ್ನು ಫುಲ್‌ಫಿಲ್ ಮಾಡಿಕೊಳ್ಳೋಕೆ ಕಳ್ಳದಾರಿ ಹುಡುಕ್ತಿರಬಹುದು ಅಂತ ಯೋಚಿಸಿ ಮುಂಬೈಗೆ ಬಾ ಅಂತ ಕರೆದಿರಬಹುದೇ? ಡರ್ಟಿಫೆಲೊ, ಸೆಕ್ಸ್‌ವರ್ಕರ್‌ಗಳನ್ನೂ ಇಷ್ಟು ಸಲೀಸಾಗಿ ಬರ್ತೀಯಾ ಅಂತ ಕರೀತಾರೊ ಇಲ್ಲವೊ.

ಅವನ (ಬಾಸ್) ಹೆಸರು ಶರತ್ಚಂದ್ರ. ಅಮೆರಿಕ ಮೂಲದ ಕಂಪನಿಯ ಸಿಇಒ. ಅವಳು ಅಶ್ವಿನಿ, ಅವನ ಸೆಕ್ರೆಟರಿ.

***

ಅಶ್ವಿನಿ ಈ ಕಾರ್ಪೋರೇಟ್ ಕಂಪನಿಗೆ ಸೇರುವ ಮೊದಲು, ಸರ್ಕಾರಿ ಕಾಲೇಜೊಂದರಲ್ಲಿ ಇಂಗ್ಲಿಷ್ ಲೆಕ್ಚರರ್ ಆಗಿದ್ದಳು. ತುಂಬಾನೇ ಸೆನ್ಸಿಟಿವ್. ಅಪಾರ ಜೀವನೋತ್ಸಾಹಿ. ಆದರೆ, ಏನಾಯಿತೋ ಮದುವೆ ಆದ ಮೇಲೆ ಉತ್ಸಾಹ ಕಳೆದುಕೊಂಡಳು. ಜತೆಗೆ ಅದೃಷ್ಟವೂ ಕೈಕೊಟ್ಟಿತ್ತು. ಮೂರೇ ವರ್ಷಗಳಲ್ಲಿ ಅವಳ ಮದುವೆ ಮುರಿದು ಬಿತ್ತು.

'ವಿಕಾಸ ನನ್ನ ಸ್ವಂತ ತಂಗಿಯ ಮಗ. ನಿನ್ನ ತುಂಬಾ ಇಷ್ಟಪಟ್ಟಿದ್ದಾನೆ, ಕೊನೆವರೆಗೂ ನಿನ್ನ ಚೆನ್ನಾಗಿ ನೋಡಿಕೊಳ್ತೀನಿ ಅಂತ ನಂಗೆ ಮಾತು ಕೊಟ್ಟಿದ್ದಾನಮ್ಮ. ಇದೇ ಊರಲ್ಲಿ ನಮ್ಮ ಕಣ್ಣೆದುರಿಗೇ ಇರ್ತೀಯಾ...' ಅಂತ ಹೇಳಿ ಅಪ್ಪ ಸೋದರಳಿಯನ ಜತೆ ಅವಳ ಮದುವೆ ಮಾಡಿದ್ದರು. ಆದರೆ, ಆರು ತಿಂಗಳ ಹಿಂದೆ ವಿಕಾಸನ ಜತೆ ಜಗಳ ಮಾಡಿಕೊಂಡು ಅಶ್ವಿನಿ ಅಪ್ಪನ ಮನೆಗೆ ಬಂದಳು. ಮತ್ತೆ ಗಂಡನ ಮನೆಗೆ ಹೋಗಲಿಲ್ಲ. ಅವನೂ ಕರೆಯಲು ಬರಲಿಲ್ಲ.

'ನಿಮ್ಮ ಅಳಿಯ ಸಭ್ಯನ ಮುಖವಾಡ ಹಾಕಿಕೊಂಡಿದ್ದ ಅಂತ ನಂಗೆ ಮೊದಲು ಗೊತ್ತಾಗಲಿಲ್ಲಪ್ಪ. ಮದುವೆಗೆ ಮೊದಲು ನಿನ್ನ ಪದ್ಯಗಳು ನಂಗಿಷ್ಟ ಅಂತಿದ್ದ. ಆಮೇಲೆ ಏನಾಯ್ತೊ, ನನ್ನ ಪದ್ಯ ಪತ್ರಿಕೆಯಲ್ಲಿ ಪ್ರಕಟವಾದಾಗ ಅದೇನು ಅಂತ ಬರೆದಿದ್ದೀಯೇ. ಅದರಲ್ಲಿ ಒಂದೇ ಒಂದು ಪೊಯೆಟಿಕ್ ಆದ ಸಾಲು ಇಲ್ಲ ಅಂತಿದ್ದ. ಯಾರಾದರೂ ಫೋನ್ ಮಾಡಿ ಪದ್ಯ ಓದಿದೆ,



ಇಷ್ಟವಾಯ್ತು ಅಂತ ಹೇಳಿದರೆ ಸಾಕು, ಸಿಟ್ಟು ಮಾಡಿಕೊಳ್ತಿದ್ದ. ಆಮೇಲೆ ಯಾರನ್ನು ಕುರಿತು ಬರೆದ ಪದ್ಯ ಅದು ಅಂತ ವಿಚಾರಣೆ ಶುರುಮಾಡ್ತಿದ್ದ. ಪದ್ಯದಲ್ಲೂ ನನ್ನ ಕ್ಯಾರೆಕ್ಟರ್ ಶಂಕಿಸಿದ! ಒಂದು ಪದ್ಯದಲ್ಲಿ ವಸಂತನ ರೆಫೆರೆನ್ಸ್ ಬರುತ್ತೆ. ಯಾರೇ ಅದು ವಸಂತ ಅಂತ ಕೇಳಿದ. ಅದು ವಸಂತ ಋತು ಕುರಿತ ಪದ್ಯ ಅಂತ ಹೇಳಿದರೂ ಅವನಿಗೆ ಅನುಮಾನ ಹೋಗಲಿಲ್ಲ. ಬ್ಯಾಂಕಿನ ಪಂಜರದೊಳಗೆ ಕೂತು ದುಡ್ಡು ಎಣಿಸುವ ಅವನಿಗೆ ಸಾಹಿತ್ಯದ ಗಂಧ ಗಾಳಿ ಎಲ್ಲಿಂದ ಬರಬೇಕು? ಇನ್ನು ಅವನಮ್ಮ, ನಿಮ್ಮ ತಂಗಿ, ಆ ಹೆಂಗಸೂ ಅಷ್ಟೇ. ಅಮ್ಮ, ಮಗ ಇಬ್ಬರೂ ಸ್ಯಾಡಿಸ್ಟ್‌ಗಳು, ಮೆಂಟಲಿ ಸಿಕ್ ಪೀಪಲ್. ಒಂದ್ಸಲ ಕಾಲೇಜಲ್ಲಿ ಅಮೆರಿಕದ ಫೆಮಿನಿಸ್ಟ್ ಲೇಖಕಿಯೊಬ್ಬರ ಕುರಿತು ಸೆಮಿನಾರ್ ಆರ್ಗನೈಸ್ ಮಾಡಿದ್ದೆ. ಅವತ್ತು ಅಮ್ಮ, ಮಗ ಸೇರಿಕೊಂಡು ನಂಗೆ ಕಾಲೇಜಿಗೆ ಹೋಗಲು ಬಿಡಲಿಲ್ಲ!'

'ನಾನು ಮತ್ತೆ ಆ ಮನೆಗೆ ಹೋಗಲ್ಲ, ಅವರ ಮುಖ ನೋಡಲ್ಲ. ನಿಮಗೆ ಹೊರೆಯಾದರೆ ಹೇಳಿ, ನಾನು ಬೇರೆ ಮನೆ ಮಾಡಿಕೊಂಡು ಒಬ್ಬಳೇ ಇರ್ತೀನಿ. ನಾನು ಇನ್ನೊಂದು ಮದುವೇನೂ ಮಾಡಿಕೊಳ್ಳಲ್ಲ...' ಅಂತ ಅಪ್ಪನೆದುರು ಸ್ಪಷ್ಟವಾಗಿ ಹೇಳಿದ್ದಳು. ಮೂರು ವರ್ಷ ಗಂಡನ ಮನೆಯ ನರಕಸದೃಶ ಜೀವನ ಅವಳ ಮನಸ್ಸಿನಲ್ಲಿ ಸ್ಥಾಯಿಯಾಗಿ ಉಳಿದು ಆಗಾಗ ಕೆಟ್ಟ ಕನಸಿನಂತೆ ನೆನಪಾಗುತ್ತಿತ್ತು.

ಗಂಡ ಹೆಂಡತಿ ನಡುವೆ ಜಗಳ, ಮನಸ್ತಾಪ ಇದ್ದದ್ದೇ. ಆದರೆ, ಹೆಂಗಸರು ಮಾತ್ರ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಎಲ್ಲವನ್ನೂ ಮರೆತು ತಾವೇ ಪರಮಸುಖಿಗಳು ಅನ್ನೋ ಥರ ಜೀವನ ಮಾಡ್ತಾರಲ್ಲ ಅಂತ ಅವಳಿಗೆ ಆಶ್ಚರ್ಯವಾಗುತ್ತಿತ್ತು. ಅಂಥ ಮನಸ್ಥಿತಿ ಬೆಳೆಸಿಕೊಳ್ಳೋದು ತನಗೇಕೆ ಸಾಧ್ಯವಿಲ್ಲ ಅಂತ ಅವಳಿಗೆ ಸದಾ ಅನ್ನಿಸ್ತಿತ್ತು. ಅದನ್ನು ಅಮ್ಮನಿಗೂ ಹೇಳಿದ್ದಳು. ಹೆಣ್ಮಕ್ಕಳ ಜೀವನವೇ ಹಾಗೆ. ಸದಾ ಮುಖವಾಡ ಹಾಕಿಕೊಂಡು, ನೆಮ್ಮದಿಯಾಗಿ ಇದ್ದೇವೆ ಅನ್ನೋ ಥರ ಬದುಕಬೇಕು. ಪ್ರತಿ ದಿನ, ಪ್ರತಿ ಕ್ಷಣ